Mysore Office— Chamarajapuram. ವಾರದ ಸಂಚಿಕೆ
Bangalore Office— 9 Bull Temple Road, Ba avangudi.
Reg No. M 1299) Daily & Weekly (Founded 1917

ಸತ್ಯವಾದಿ
SATYAVADI

ಸಂಪುಟ 27 ಸಂಚಿಕೆ 38] ಸೋಮವಾರ 8—11—43 [6 ಪೈ

ಆಹಾರಾಭಾವ

ಅಮೇರಿಕಾ ಸಂಯುಕ್ತ ಸಂಸ್ಥಾನವು ಪ್ರಪಂಚದಲ್ಲೆಲ್ಲಾ ಸಂಪೃಷ್ಟಿಯಾದ ಪ್ರದೇಶವಷ್ಟೆ. ಅಲ್ಲಿ ಯಾವಾಗಲೂ ಅನ್ನಕ್ಕೆ ತಾಪತ್ರಯವಿಲ್ಲ. ಆದರೆ ಈಗ ಅಲ್ಲೂ ಕ್ಷಾಮ, ಈಗ ತಾನೇ ಅಲ್ಲಿಂದ ಬಂದವರೊಬ್ಬರು ಹೀಗೆ ಹೇಳುತ್ತಾರೆ. ಅಲ್ಲಿ ಜನರು ಮುಂಚೆ ಊಟ ಮಾಡುತ್ತಿದ್ದುದಕಿಂತ ಈಗಹೆಚ್ಚು ತಿನ್ನುತ್ತಾರೆ ಜನರ ವರಮಾನ ಈಗ ಮೂರರಷ್ಟು ಹೆಚ್ಚಿದೆ. ಜನರು ಬಳಿ ಹಣ ವಿಪರೀತ ಸೇರಿದೆ. ಪ್ರಜಾಸಂಖ್ಯೆ ನಾಲ್ಕರಷ್ಟು ಮಾತ್ರ ಹೆಚ್ಚಿದೆ. ಜನರು ಈಗ ಬಗೆಬಗೆಯ ಆಹಾರ ಸೇವನೆ ಮಾಡುವರು. ಆಹಾರ ಅಭಾವಕ್ಕೆ ಮತ್ತೊಂದು ಕಾರಣ.ಸೇನೆಗೆ ಆಹಾರ ಒದಗಿಸಬೇಕು. ಸೇನೆಯವರು ನಾವು ಊಟ ಮಾಡುವುದಕ್ಕಿಂತ ಶೇಕಡ 26 ರಷ್ಟು ಹೆಚ್ಚು ತಿನ್ನುವರು, ಅವರು ತಿನ್ನದೆ ಬಿಡಾಡುವುದು ಸಹಾ ವಿಪರೀತವಿದೆ. ಲೆಂಡ್-ಲೀಜ್ ಪ್ರಕಾರ ಅಮೇರಿಕಾ ಸೇನೆಗೆ ಆಹಾರ ಒದಗಿಸಬೇಕು, ಹಡಗಿನ ಅಭಾವದಿಂದ ಅಮೇರಿಕ ಸೇನೆಗಳಿಗೆ ಆಹಾರವನ್ನು ಅಯಾಯ ದೇಶಗಳಲ್ಲಿ ಒದಗಿಸಬೇಕು. ಈಗಿನ ಯುದ್ಧದಿಂದ ಅಮೇರಿಕಾದವರ ಆಹಾರ ಬೆಲೆಯನ್ನು ಶೇಕರ 40 ರಂತೆ ಹೆಚ್ಚಿರುವದು, ಸಂಸಾರದ ಖರ್ಚು ಶೇಕಡ 25 ರಂತೆ ಹೆಚ್ಚಿದೆ. ಸರ್ಕಾರದವರು ಆಹಾರದ ಬೆಲೆಯನ್ನು ನಿಷ್ಕರ್ಷೆ ಮಾಡಿದರೂ, ಅಮೇರಿಕಾದಲ್ಲೂ ಬ್ಲಾಕ್ ಮಾರ್ಕೆಟ್ಟಿದೆ, ಇದು ಯುದ್ಧ ಕಾಲ. ಅಮೇರಿಕವಾಗಲೀ ಭಾರತವಾಗಲೀ ಕಷ್ಟವನ್ನು ಅನುಭವಿಸಲೇ ಬೇಕು, ಬ್ರಿಟಿಷ್ ಮಾತ್ರ ತನ್ನ ಆಹಾರವನ್ನು ತಾನೇ ಬೆಳೆದು ತಿನ್ನುವುದು. ಅಲ್ಲಿಯ ಆಹಾರ ಮಂತ್ರಿಯಾದ ಲಾರ್ಡ್ ಉಲ್ಟನ್ನರ ದೂರದೃಷ್ಟಿಯೇ ಇದಕ್ಕೆ ಕಾರಣ.

ಭಾರತ ಸಮಸ್ಯೆ

ಬಗೆ ಹರಿಯಲು

ಅಮೇರಿಕಾ ಸೆನೇಟರುಗಳು ಮಾಸ್ಕೋ ತೀರ್ಮಾನವನ್ನು ಖಂಡಿಸಿ, ಆದರಲ್ಲೇನೂ ಹೊಸದಿಲ್ಲವೆಂದೂ, ಬ್ರಿಟನ್ನಿನ ನೀತಿಯ ವಿಷಯದ ಹೇಳಿಕೆಯನ್ನು ಅಮೇರಿಕಾ ಪಡೆಯಲು ತಪ್ಪಿದೆಯೆಂದೂ, ಭಾರತದ ಸಮಸ್ಯೆ ಬಗೆಹರಿಯುವುದು ಯುದ್ಧದ ಮುಂಚಿನ ವಿಷಯವಾಗಿರಬೇಕೆಂದೂ ಅಭಿಪ್ರಾಯ ಪಟ್ಟಿರುವರು.

ಈವಾರದ ಭವಿಷ್ಯ

ಕೃಷ್ಣಾಪುರದ ವೆಂಕಟನರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ

ಮೇಷ

ಹಣಕಾಸಿನ ಅಡಚಣೆ ತಗ್ಗುವುದು, ನೌಕರಿ ಉದ್ಯೋಗಗಳಲ್ಲಿ ಲಾಭಕರ.

ವೃಷಭ

ಸಾಂಪತ್ತಿಕ ಸ್ಥಿತಿ ಸೌಖ್ಯದಾಯಕವಾಗಿಲ್ಲ. ಚಿಂತೆ ತಗ್ಗಿಲ್ಲ. ಅಧಿಕಾರ ವರ್ಗದಿಂದ ಸ್ವಲ್ಪ ಅನುಕೂಲವಿದೆ.

ಮಿಥುನ

ಸ್ಥಿತಿಗತಿಗಳು ಹಾಗಾಗಲೇ. ಜಾಗರೂಕತೆಯಿಂದ ವರ್ತಿಸುವುದು ಒಳ್ಳೆಯದು.

ಕರ್ಕಾಟಕ

ಯಿತ್ನಕಾರ್ಯದಲ್ಲಿ ಜಯ, ಆರ್ಥಿಕ ಸ್ಥಿತಿ ಉತ್ತಮ.

ಸಿಂಹ

ಎಲ್ಲಾ ರೀತಿಯಲ್ಲಿಯೂ ಅನುಕೂಲವಾಗಿದೆ.

ಕನ್ಯಾ

ನಿಮ್ಮ ಬುದ್ಧಿ ಪ್ರಕಾಶಕ್ಕೆ ಒಂದೀಕು. ಉತ್ತಮ ಜನರ ಸಹವಾಸ ದೊರೆಯುವುದು. ಇತರ ವಿಷಯಗಳೆಲ್ಲಾ ಅನುಕೂಲವಾಗಿದೆ.

ತುಲಾ

ಆರೋಗ್ಯ ವಿಷಯದಲ್ಲಿ ಹುಷಾರಾಗಿರಿ. ದುಡ್ಡಿನ ತಾಪತ್ರಯ ತಗ್ಗುವುದು.

ವೃಶ್ಚಿಕ

ದುಷ್ಟ ಜನರಿಂದ ಕಿರುಕುಳ. ಸ್ವಪರ ಜನರಲ್ಲಿ ಮರ್ಯಾದೆ ಹೆಚ್ಚಾಗಿದೆ.

ಧನು

ಒಳ್ಳೇಕಾಲ. ಹಣ, ದೊಡ್ಡಸ್ತಿಗೆ ಎಲ್ಲಾ ದೊರೆಯುವುದು.

ಮಕರ

ನಿಮಗೆ ಯಾವ ರೀತಿಯಲ್ಲೂ ಕುಂದಿಲ್ಲ. ಎಲ್ಲಾ ಅನುಕೂಲಗಳಿವೆ.

ಕುಂಭ

ನಿಮ್ಮ ಆರೋಗ್ಯದ. ಹಿತಶತ್ರುಗಳ, ಹಣಕಾಸಿನ ವಿಷಯದಲ್ಲಿ ಸ್ವಲ್ಪ ಎಚ್ಚರಿಕೆ ಇರುವುದು ಕ್ಷೇಮಕರ,

ಮೀನ

ಸ್ಥಿತಿಗತಿಗಳು ಸಾಮಾನ್ಯವಾಗಿವೆ.

ವಿವಿಧ ವಿಷಯ

ರಷ್ಯಾದಲ್ಲಿ ಈ 15 ದಿವಸಗಳಲ್ಲಿ 30 ಸಾವಿರ ಚ. ಮೈಲಿ ಭೂಮಿಯನ್ನು ಜರ್ಮನರು ಕಳೆದುಕೊಂಡಿರುತ್ತಾರೆ.

ಮೂನ್ನೇದಿನದ ಅಮೇರಿಕ ವಿಮಾನಗಳು 1000 ಕ್ಕೆ ಮೇಲ್ಪಟ್ಟು ಜರ್ಮನಿಯ ಮೇಲೆ ಧಾಳಿ ಮಾಡಿದವು.

ಮೊನ್ನೇ ದಿನವೂ ಶತ್ರು ವಿಮಾನಗಳು ಲಂಡನ್ ಮೇಲೆ ಬಂದಿದ್ದವು.

ಮಿತ್ರ ಸೇನೆಗಳು ರೋಂ ಪಟ್ಟಣದ ಹತ್ತಿರ ಬಂದಿರುವವು- ಅಂದರೆ ಗುಂಡಿನೇಟಿಗೆ ಸಿಕ್ಕುವಷ್ಟು ಹತ್ತಿರವಿವೆ,

ಪೋಲೆಂಡು ಗಡಿಗೆ 50 ಮೈಲಿ ದೂರದಲ್ಲಿ ರಷ್ಯನರು ಬಂದಿರುತ್ತಾರೆ.

ಭಾರತದ ಡೇರಾಗಳು ಪ್ರಪಂಚದ ನಾನಾ ಭಾಗಗಳಿಗೆ ಈ ದೇಶದಿಂದ ರವಾನೆಯಾಗುತ್ತಿದೆ, ಇತರ ದೇಶಗಳಲ್ಲಿ ಈ ಉದ್ಯೋಗವು ಇದ್ದರೂ ಭಾರತದಷ್ಟು ಮಟ್ಟಿಲ್ಲಿಯೂ ತಯಾರಾಗುವುದಿಲ್ಲ.

ಶ್ರೀಪರಶುರಾಂಹಾಲ್

ಸಯ್ಯಾಜಿರಾವ್ ರೋಡ್, ಮೈಸೂರು,
ನಮ್ಮಲ್ಲಿ ಎಲ್ಲಾ ವಿಧವಾದ ಬಟ್ಟೆಗಳೂ
ಸರಿಯಾದ ಬೆಲೆಗೆ ದೊರೆಯುತ್ತವೆ.

Laksbminarasimha Press

Artistic & Colour Printing

ಸ್ನಾನ

ಈಗ 200-300 ವರ್ಷಗಳ ಕೆಳಗೆ ಯೂರೋಪಿನಲ್ಲಿ ಜನರು ಸ್ನಾನ ಮಾಡುವದು ತಮಗಲ್ಲವೆಂದು ಐಶ್ವರ್ಯವಂತರು ತಿಳಿದಿದ್ದರು. ಕೆಲವರು ತಮ್ಮ ಜಾತಿಯ ಕಟ್ಟಲೆಗೆ ತಪ್ಪಿ ಸೇರಿದ್ದಲ್ಲವೆನ್ನುತ್ತಿದ್ದರು. ಲೋಕವಿಖ್ಯಾತರಾದ ಹಲೆನ್ಸ್ ಮತ್ತು ವೇರಿ ಅಂಟಾಯಿನೆಟ್ ಸ್ನಾನ ಮಾಡುತ್ತಿದ್ದುದು ಯಾವಾಗಲೋ ಒಂದು ಸಲ. ಫ್ರಾನ್ಸಿನ ರಾಜನಾದ 14 ನೇ ಲೂಯಿಯು ವರ್ಷಕ್ಕೆ ಒಂದು ಸಾರಿ ಸ್ನಾನ ಮಾಡುತ್ತಿದ್ದುದು, ಇವನು ಮುಖವನ್ನು ಕೂಡ ತೊಳೆಯುತ್ತಿರಲಿಲ್ಲ, ಆದರೆ ಸುವಾಸನೆ ದ್ರವ್ಯಗಳನ್ನು ಮೈ ಮೇಲೆ ಸುರಿದುಕೊಳ್ಳುತ್ತಿದ್ದನು.

ಮೊದಲು ಸ್ನಾನಮಾಡಿದರೆ ಎಲ್ಲಿ ಜಾತಿಯಿಂದ ಬಹಿಷ್ಕಾರ ಹಾಕುತ್ತಾರೋ ಎಂದು ಹೆದರುತ್ತಿದ್ದರು. ಫಿಲೆಂಡಿನಲ್ಲಿ ಕಲ್ಲುಗಳನ್ನು ಬೆಂಕಿಯಿಂದ ಕಾಯಿಸಿ, ನೀರನ್ನು ಸುರಿದು ಆಗ ಒರುತ್ತಿದ್ದ ಆವಿಯಿಂದ ಸ್ನಾನಮಾಡುತ್ತಿದ್ದರು. ಆ ಆವಿಗೆ ಗಂಡಸರೂ, ಹೆಂಗಸರೂ ಒಟ್ಟಿಗೆ ಬಟ್ಟೆಯಿಲ್ಲದೆ ಬೆತ್ತಲೆ ಸ್ನಾನ ಮಾಡಿ, ಶಕೆ ಸಹಿಸಲಾರದಾಗ ಹೊರಗೆ ಬಂದು, ತಂಗಾಳಿ ಸೇವಿಸುತ್ತಿದ್ದರು. ಮೆಕ್ಸಿಕೋದವರು ಕಲ್ಲನ್ನು ಕೆಂಪಿಗೆ ಕಾಯಿಸಿ ಮೇಲುಗಡೆ ಒಂದು ಕುರ್ಚಿಯಲ್ಲಿ ಕೂತು, ಕಾದಕಲ್ಲಿಗೆ ಒಣಗಿದ ಸೊಪ್ಪನ್ನು ಹಾಕಿ. ಬರುತ್ತಿದ್ದ ಹೊಗೆಯಲ್ಲಿ ಮೈಬೆವರುವವರೆಗೆ ಇರುತ್ತಿದ್ದರು. ನಂತರ ಕಾದ ಕಲ್ಲಿಗೆ ತಣ್ಣೀರನ್ನು ಸುರಿದು, ಬಿಸಿಹಬೆಯನ್ನು ಸೇವಿಸುತ್ತಿದ್ದರು, ಯೂರೋಪಿನಲ್ಲಿ ಗ್ರೀಕರೂ, ರೋಮನ್ನರೂ ಮಾತ್ರ ಈಗಿನ ಹಾಗೆ ತಣ್ಣೀರಿನಲ್ಲಿ ಸ್ನಾನ ಮಾಡುತ್ತಿದ್ದರು. ಗ್ರೀಸ್ ರಾಣಿಯಾದ ಶ್ರೀಮತಿ ನೀರೋರವಳು ಕತ್ತೆಯ ಹಾಲಿನಲ್ಲಿ ಪ್ರತಿ ದಿವಸವೂ ಸ್ನಾನ ಮಾಡುತ್ತಿದ್ದಳು. ಇದಕ್ಕಾಗಿ ತನ್ನ ಅರಮನೆಯಲ್ಲಿ 500 ಕರೆಯುವ ಕತ್ತೆಗಳನ್ನು ಯಾವಾಗಲೂ ಕಟ್ಟಿಕೊಂಡಿರುತ್ತಿದ್ದಳು. ಗ್ರೀಕರೂ ರೋಮ್ಯ ಹೆಂಗಸರು ಗಂಡಸರೂ ನಗ್ನರಾಗಿ ಕೆರೆಗಳಲ್ಲೂ, ಕೊಳಗಳಲ್ಲೂ, ನದಿಗಳಲ್ಲೂ ಸ್ನಾನಮಾಡುತ್ತಾ ಬಹಳ ಹೊತ್ತು ಕಳೆಯುತ್ತಿದ್ದರು. ಕೆಲವು ಕಾಲಾನಂತರ ಸ್ನಾನ ಮಾಡುವಾಗ ಗಂಡಸರೂ ಹೆಂಗಸರೂ ಹಾಡುತ್ತಾ, ಕುಣಿಯುತ್ತಾ, ಕಾಲಕಳೆಯುತ್ತಿದ್ದರು. ರಾಜರು ಸಹಾ ಇವರಲ್ಲಿಯೇ ಸೇರಿ ತಾವೂ ಆನಂದಪಡುತ್ತಿದ್ದರು. ಹೀಗೆ ಸ್ನಾನ ಮಾಡುವವರನ್ನು ನೋಡಿ ಆನಂ

ದಿಸಲು ಕೊಳಗಳ ಸುತ್ತಲೂ ಗ್ಯಾಲರಿಗಳನ್ನು ಹಾಕಿರುತ್ತಿದ್ದರು. ಸ್ನಾನ ಮಾಡದಿರುವವರು ಇಲ್ಲಿ ಕೂತು ಕುಣಿತವನ್ನು ನೋಡುತ್ತಾ ಆನಂದಿಸುತ್ತಿದ್ದರು. ಸ್ನಾನ ಎಮಗಿದ ಕೂಡಲೇ ಕಾಫಿ ಮುಂತಾದ್ದನ್ನು ಪಾನ ಮಾಡುತ್ತಿದ್ದರು.

ಈ ರೋಮನ್ನರ ಮತ್ತು ಗ್ರೀಕರ ಈ ಪದ್ಧತಿಯು ಸಿಸೆರೋ, ಓವಿಡ್ ಮೊದಲಾದವರಿಗೆ ಸರಿಬೀಳಲಿಲ್ಲ ವೈದ್ಯರು ಸಹಾ ಹೆಚ್ಚು ಕಾಲ ನೀರಿನಲ್ಲಿರುವುದು ಸ್ನಾನಮಾಡುತ್ತಲೇ ತಿನ್ನುವುದು ಕೆಟ್ಟ ದೆಂದು ಬೋಧಿಸಲಾರಂಭಿಸಿದರು, ಮಠಾಧಿಪತಿಗಳು ಸಹ ಇದು ಕೆಟ್ಟ ಪದ್ಧತಿ ಎಂದು ಹೇಳುತ್ತಾಬಂದರು, ಮಾರ್ಕ್ಯೂಸ್ ಆರ್ರೆಲಿಯಸ್ ಕಾಲದಲ್ಲಿ ಈ ಸ್ನಾನಮಂದಿರಗಳು ಮೂಲೆಗೆ ಬಿದ್ದವು.

ಬ್ರಿಟನ್ನಿನಲ್ಲಿ ಸ್ನಾನಮಾಡುವುದರಿಂದ ತೊನ್ನು ರೋಗ ಹೋಗುವುದೆಂದು ಜನರು ನಂಬಿದರು. ಯುವರಾಜ ಬಲದುದ್ದಿಗೆ ತೊನ್ನು ರೋಗ ಪ್ರಾಪ್ತವಾಯಿತು, ದೇವರ ಶಾಪದಿಂದ ಈ ರೋಗ ಬಂತೆಂದು ಜನರು ಯುವರಾಜನನ್ನು ದೇಶದಿಂದ ಓಡಿಸಿದರು. ಯುವರಾಜನು ಕಾಡಿಗೆ ಹೋಗಿ ಹಂದಿ ಸಾಕುವವರಲ್ಲಿ ಆಶ್ರಯ ಪಡೆದನು. ತನ್ನಲ್ಲಿದ್ದ ಒಂದು ಹಂದಿಗೆ ತೊನ್ನು ರೋಗ ಒಂದಿತು. ಯುವರಾಜನು ಈ ತೊನ್ನು ಹಂದಿಯನ್ನು ನದಿಯ ಇನ್ನೊಂದು ಡಡಕ್ಕೆ ಕೊಂಡ್ಯೊಯ್ದನು. ಅಲ್ಲಿ ಅದು ತಪ್ಪಿಸಿಕೊಂಡಿತು. ಬಹಳ ದಿವಸಗಳ ಮೇಲೆ ಅದು ಪತ್ತೆಯಾಯಿತು. ಆ ಹಂದಿಯು ಅಲ್ಲಿಯ ಕೆಸರಿನಲ್ಲಿ ಯಾವಾಗಲೂ ಇದ್ದುದರಿಂದ ಅದರ ತೊನ್ನು ವಾಸಿಯಾಗಿತು, ಯುವರಾಜನು ಸಹಾ ಆ ಕೆಸರಿನಲ್ಲಿ ಬಹಳ ಹೊತ್ತು ಹೊರಳಾಡುತ್ತಾ ತನ್ನ ತೊನ್ನು ರೋಗವನ್ನು ವಾಸಿ ಮಾಡಿಕೊಂಡು, ತನ್ನ ದೇಶಕ್ಕೆ ಹೋದನು. ತಾನು ಧೊರೆಯಾದಾಗ ಅಲ್ಲೇ ಒಂದು ಕೊಳ ಕಟ್ಟಿಸಿ, ಆ ಕೊಳದ ಮಹತ್ವವನ್ನು ಸಾರಿದನು.

ಜಪಾನಿನಲ್ಲಿ ಸ್ನಾನವನ್ನು ಎಲ್ಲರೂ ಪ್ರತಿ ದಿವಸವೂ ಮಾಡುವರು. ಸ್ನಾನ ಮಾಡುವ ನೀರು ಉತ್ಕೃಂ ಬಿಸಿಯಾಗಿರುತ್ತದೆ: ಇಷ್ಟು ಬಿಸಿನೀರನ್ನು ಮತ್ಯಾವ ಜನಾಂಗವೂ ಹಾಕಿಕೊಳ್ಳುವುದಿಲ್ಲ. ಇವರು ಹಾಕಿಕೊಳ್ಳುವಷ್ಟಿಲ್ಲ ಇವರು ಹಾಕಿಕೊಳ್ಳುವ ಬಿಸಿನೀರು 103 ಡಿಗ್ರಿ ಶಾಖವಿರುವುದು, ಜಪಾನ್ ಹೆಂಗಸರು ಕುಚೀನಯಲ್ಲಿ ಕೂತು ಸ್ನಾನ ಮಾಡುವಲ್ಲಿಗೆ ಹೋಗುತ್ತಾರೆ. ಅಲ್ಲಿ ಇವರನ್ನು ಒಂದು ಕೋಣೆಗೆ ಕರೆದುಕೊಂಡು ಹೋಗುವರು. ಆಲ್ಲಿರುವ ಗಂಡಸು ಕೆಲಸಗಾರರು ಇವರ ಒಟ್ಟಿಯನ್ನು ತೆಗೆಯುವರು. ಅಲ್ಲಿರುವ ಹೆಂಗಸರೆಲ್ಲರೂ ಮಾತನಾಡುತ್ತಾ ಕಾಲ ಕಳೆಯುವರು. ಜಪಾನ್ ಹೆಂಗಸರ ಉಡುಪನ್ನು ತೆಗೆಯುವದು ಸುಲಭ ಕೆಲಸವಲ್ಲ. ಅವರ ಹೆರಳನ್ನು ಬಿಚ್ಚಬೇಕು. ರೇಷ್ಮೆಯ ರಿಬ್ಬನ್ ಮೈ ಮೇಲೆಲ್ಲಾ ಜಗಿದುಕೊಂಡಿರುವರು. ಚಾಕರನು ಇವರ ಮೈ ಕೈ ಎಲ್ಲವನ್ನೂ ಉಜ್ಜಿ ಉಜ್ಜಿ ಮೈ ಒಣ್ಣ ಕೆಂಪಾಗುವರೆಗೂ ನೀರು ಸುರಿಯುತ್ತಿರುತ್ತಾನೆ. ಸ್ನಾನ ಮಾಡುವವಳು ಕನ್ನಡಿಯಲ್ಲಿ ತನ್ನ ದೇಹವು ಕೆಂಪಗಾದದನ್ನು ನೋಡಿ, ಸ್ನಾನ ಮುಗಿಸಿ ಅಲ್ಲಿರುವ ಒಂದು ಕೂಡಿಗೆ ಹೋಗುವಳು. ಅಲ್ಲಿ ಜಪಾನ್ ಕುಡಿಯುವಳು ಸೇವಕನು ಅವಳ ಮೈ ಕೈ ದೇಹದ ಮೇಲೆಲ್ಲಾ ಸುವಾಸನೆ ದ್ರವ್ಯಗಳನ್ನು ಉಜ್ಜಿ ಬಟ್ಟೆ ಉಡಿಸುವನು.

ಸ್ನಾನ ಮಾಡುವದರಲ್ಲಿ ಮೊಗಲ್ ಚಕ್ರವರ್ತಿ ಜಹಾಂಗೀರ್‌ನಿಗಳನ್ನು ಮೀರಿಸಿದವರು ಯಾರೂ ಇಲ್ಲ. ಇವರಿಗೆ ಸ್ನಾನಕ್ಕೆ ಗುಲಾಬಿ ಅತ್ಯರೇ ಆಗಬೇಕು.

ಈಗ ಎಷ್ಟೋ ತರಹ ಸ್ನಾನಮಂದಿರಗಳಿವೆ. ವಿದ್ಯುಚ್ಛಕ್ತಿ ಸ್ನಾನ, ಗಂಧಕ ಸ್ನಾನ, ಡಾಷ್ ಸ್ನಾನ. ಇಷ್ಟಾದರೂ ಹಿಂದೂಗಳು ಮಾಡುವ ಸ್ನಾನಕ್ಕೆ ಇವೆಲ್ಲಾ ಸರಿಬರುವುವೇ! ಇದರಷ್ಟು ಆನಂದಕರವಾದ ಸ್ನಾನ, ಶಾಸ್ತ್ರವಾದ ಸ್ನಾನ, ಕಾಸು ಖರ್ಚಿಲ್ಲದ ಸ್ನಾನ. ಕೆರೆ. ಕೊಳ. ಕಾಲುವೆ. ನದಿಯಲ್ಲಿ ಮುಳುಗಿ ಈಜುತ್ತಾ ಸ್ನಾನ ಮಾಡುವುದು ಎಷ್ಟು ಆನಂದಕರ. ಇದನ್ನು ಮೊಗಲರೂ ಕೂಡ ಸ್ವಪ್ನದಲ್ಲಿಯೂ ಕಂಡಿರಲಿಲ್ಲ, ಗ್ರೀಕರೂ ರೋಮನ್ನರೂ ಕೆವಿಯಲ್ಲೂ ಕೇಳಿರಲಿಲ್ಲ. ಯೂರೋಪು ಜನಾಂಗವೇ ಈ ನಮ್ಮ ಪದ್ಧತಿಯನ್ನು ಅರಿತಿರಲಿಲ್ಲ.

ಮಿ॥ ರೂಸ್ವೆಲರ ಬೆಲ್ಟ ಅಡಳಿತದಲ್ಲಿ ಬೇಜಾರೇ!

ಸಂಯುಕ್ತ ಸಂಸ್ಥಾನದ ಜನಾನಸೆಯಲ್ಲಿ ರಿಪಬ್ಲಿಕನ್ನರೇ ಹೆಚ್ಚಾಗಿ ವಿಜಯಗೊಂಡು ಅನೇಕ ಗೌರ್ನರ್ ಪದವಿಗಳು ಇವರ ಕರಗತವಾಗುತ್ತಿದೆ ಮುಂದಿನ ಪೆಸಿಡೆಂಟರ ಚುನಾವಣೆಯಲ್ಲಿ ರಿಪಬ್ಲಿಕನರೇ ಜಯಶೀಲರಾಗುವರೆಂದು ವಿಲ್ಕಿಯವರು ಹೇಳುತ್ತಾರೆ. ಮಿ॥ ರೂಸ್ವೆಲ್ಟರ ಆಡಳಿತದಲ್ಲಿ ಬೇಜಾರಾಗಿರುವದಂತೆ!

ದೇಶವಿದೇಶ

ಅಮೇರಿಕಾದವರು ಮಾಸ್ಕೋದಲ್ಲಿ ತಮ್ಮದೊಂದು ಮಿಲಿಟರಿ ಕೇಂದ್ರ ಸ್ಥಾಪನವನ್ನು ಸ್ಥಾಪಿಸಲು ನಿಶ್ಚಯಿಸಿರುವರು.

ಂ ಂ

ದಕ್ಷಿಣ ಪೆಸಿಫಿಕ್ಕಿನ ಸಾಲಮನ್ ದ್ವೀಪ ಒಲ್ ನೌಕಾ ನಿಲ್ದಾಣವು ಬ್ರಿಟ್ರರ ವಿಮಾನ ಧಾಳಿಯಿಂದ ಪೂರ್ತಾ ನಾಶವಾಯಿತು.

ಂ ಂ

ನ್ಯೆಸ್ಸೆ ಪಾರ್ಲಿಮೆಂಟಿನಲ್ಲಿ ಮಿ॥ ಎಮರಿಯವರು ಗೋಧಿಯನ್ನು ಇಂಡಿಯಾಕ್ಕೆ ರಫ್ತುಮಾಡಲು ಜಹಜುಗಳ ತೊಂದರೆ ವಿಸಾ ಧಾನ್ಯ ತೊಂದರೆಯಿಲ್ಲವೆಂದೂ, ಇನ್ನು ಕೆಲವು ವಾರಗಳಲ್ಲಿ ವಿಶೇಷವಾಗಿ ಕಳುಹಿಸಲ್ಪಡುವುದೆಂದೂ ತಿಳಿಸಿದರು.

ಂ ಂ

ಆಸ್ಟ್ರಿಯಾದಲ್ಲಿಯ ಜನರು ಜರ್ಮನರ ಮೇಲೆ ದಂಗೆ ಎದ್ದು ಕಟ್ಟಡಗಳನ್ನು ನಾಶಮಾಡುತ್ತಿರುವರು. ಜರ್ಮನರನ್ನು ಕೊಲ್ಲುತ್ತಿರುವರು, ಈ ಸಂದರ್ಭದಲ್ಲಿ ಈಗಾಗಲೇ 400 ಮಂದಿ ದೇಶಭಕ್ತರನ್ನು ದಸ್ತಗಿರಿ ಮಾಡಿರುವರು. ವಿಯನ್ನಾ ಕ್ಕೆ ಎಸ್. ಎಸ್. ಪೋಲೀಸುದಳ ಹೋಗಿದೆ.

ಂ ಂ

ಭಾರತಕ್ಕೆ ಮತ್ತೊಂದು ಭಾರತದ ಕರಾವಳಿಯೊಂದರಲ್ಲಿ ಆಹಾರ ಪದಾರ್ಥಗಳನ್ನು ತುಂಬಿಕೊಂಡು ಬಂದಿದೆ. ಹೀಗೆ ಕೆಲವು ವಾರಗಳಿಂದ ಒಂದಿರತಕ್ಕ ಜಹಜುಗಳಲ್ಲಿ ಇದು 5 ನೇದು.

ಂ ಂ

ಆಸ್ಟ್ರಿಯಾ ಮೇಲೆ ಅಮೇರಿಕ ಬಾಂಬರುಗಳು ಧಾಳಿ ನಡೆಸಿ, ಶತ್ರು ವಿಮಾನಗಳೊಡನೆ ಕದನ ಮಾಸಿ, 230 ಶತ್ರು ವಿಮಾನಗಳನ್ನು ನಾಶಮಾಡಿದವು.

ಂ ಂ

ಮೊನ್ನೆ ಮಿತ್ರರು ಜರ್ಮನಿ ಮತ್ತು ಇತರ ಅಕ್ಸಿಮಿತ ರಾಜ್ಯಗಳ ಮೇಲೆ 2 ಸಾವಿರ ವಿಮಾನ ಸಮೇತ 16 ಗಂಟೆ ಕಾಲ ಧಾಳಿ ಮಾಡಿದರು. ಪ್ರತಿ ಗಂಟೆಗೂ 2 ಸಾವಿರ ಟನ್ ಸಿಡಿಮದ್ದನ್ನು ಸುರಿದರು. ಇಂಥಾ ಭಾರಿ ವಿಮಾನ ಧಾಳಿಯನ್ನು ಇದುವರೆಗೆ ಯಾವ ಜನಾಂಗವೂ ನಡೆಸಿರುವದಿಲ್ಲ.

ಪೋರ್ಚುಗಲ್ಲಿನಲ್ಲಿರುವ ಜರ್ಮನ್ ರಾಯಭಾರಿಯು ಜರೂಂ ಸ್ಪೇನಿಗೆ ಹೋದನು.

ಂ ಂ

ಚೀನಾ ರಸ್ತೆಯು ಬರ್ಮಾ ಪತನವಾದ ಮೇಲೆ ಚಿವಾನೀಯರ ಕೈಲಿರುತ್ತಷ್ಟೆ. ಈಗ ಬ್ರಿಟಿಷರು ಅಸ್ಸಾಂನಿಂದ ಚೀನಾ ರಸ್ತೆಯನ್ನು ಮಾಡಿ ಮುಗಿಸಿರುವರು.

ಂ ಂ

ಕರಾಚಿಯಲ್ಲಿ ಒಬ್ಬ ಪೋಲೀಸಿನವನು ಬೈಸಿಕಲ್ ಕದ್ದಿದ್ದಕ್ಕಾಗಿ 5 ವರ್ಷ ಸಜೆ.

ಂ ಂ

ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಒಂದು ಮಸೂದೆಯನ್ನು ಲಾರ್ಡ್ ಸ್ಯಾಂಜೂಲಿಯವರು ಮುಂದಿನ ಲಾರ್ಡ್ಸ್ ಸಭೆಯಲ್ಲಿ ತರುವವರಾಗಿರುವರು.

ಂ ಂ

ಕೊಚ್ಚಿನ್ನಿನಲ್ಲಿ ಮಕ್ಕಳಿಗೆ ವಾತಶಾಲೆಗಳಲ್ಲಿ ಮಧ್ಯಾಹ್ನ ಉಚಿತ ಫಲಹಾರ ಕೊಡಲು ಮಿ॥ ಅಲಗಪ್ಪಶೆಟ್ಟರು 7॥ ಲಕ್ಷ ರೂಪಾಯಿ ದಾನ ಮಾಡಿದಾರೆ.

ಂ ಂ

ಬಂಗಾಳಾ ಕ್ಷಾಮಕ್ಕೆ ಕೆನಡಾ ಸರಕಾರವು 1 ಲಕ್ಷ ಟನ್ ಗೋಧಿಯನ್ನು ಧರ್ಮಾರ್ಥವಾಗಿ ಕೊಡುವದು.

ಂ ಂ

ಭಾರತದಲ್ಲಿ ಪುಸ್ತಕ ಮಾರಾಟದಲ್ಲಿ ಸರ್ಕಾರದವರು ಹತೋಟಿ ಆಜ್ಞೆ ಮಾಡಿರುವರು,

ಂ ಂ

ಮಿ॥ ಜಿನ್ನಾರನ್ನು ಕೊಲೆ ಮಾಡಬೇಕೆಂದು ಯತ್ನಿಸಿದ ಮುಸ್ಲಿಂ ಅನಾದಿಶನಿಗೆ 5 ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು.

ಂ ಂ

ನವನಗರದ ಜಾಂ ರಾಜರು ತಮ್ಮ ದೇಶದಲ್ಲಿ ಹತ್ತಿಬೆಳೆಯುತ್ತಿದ್ದ ಭೂಮಿಯಲ್ಲಿ ಶೇಕಡ 90 ರಲ್ಲಿ ಆಹಾರ ಬೆಳೆಯುತ್ತಿರುತ್ತೇವೆಂದು ದೆಹಲಿಯಲ್ಲಿ ತಿಳಿಸಿರುವರು.

ಂ ಂ

ಇಟಲಿ ರಾಜರು ಈಗ ನೇಪಲ್ಸಿಗೆ ಬಂದಿರುತ್ತಾರೆ.

ಬ್ರಿಟನ್ನಿನಲ್ಲಿ ಜನರ ಆಯವ್ಯಯ

ಬ್ರಿಟನ್ನಿನಲ್ಲಿ ಒಬ್ಬನಿಗೆ 500 ಪೌಂಡು ವರಮಾನವಿದೆಯೆಂದು ತಿಳಿಯೋಣ. ಆಗ ಅವನು ಸರಕಾರಕ್ಕೆ 150 ಪೌಂಡು ಆದಾಯತೆರಿಗೆ ಕೊಡುತ್ತಾನೆ. ಮಸಲಾ 1 ಸಾವಿರ ಪೌಂಡು ಆದಾಯವಿದ್ದರೆ 380 ಪೌಂಡು ತೆರಿಗೆ ಕೊಡಬೇಕು. ಕೆಲಸವಿಲ್ಲದೆ ಸಂಪಾದನೆಯಾದರೆ ಸರಕಾರಕ್ಕೆ ಹೆಚ್ಚು ಕಂದಾಯ ಕೊಡಬೇಕು. ಒಂದು ಸಂಸಾರದಲ್ಲಿ ಗಂಡ, ಹೆಂಡತಿ, ಇಬ್ಬರು ಮಕ್ಕಳು ಇದ್ದು ಇವರಿಗೆ ವರ್ಷಕ್ಕೆ ಒಂದು ಲಕ್ಷ ಪೌಂಡು ಸಂಪಾದನೆಯಾದರೆ ಇವರ ಕೈಗೆ ಸೇರುವುದು 5830 ಪೌಂಡು, ಅಂದರೆ, ತಾವು ಸಂಪಾದಿಸಿದ ಹಣದಲ್ಲಿ ಸರಕಾರಕ್ಕೆ ಶೇಕಡ 94 ರಂಕೆ ಕಂದಾಯ ಕೊಡುವಂತಾಯಿತು.

ಭಾರತ ವಿಷಯ !

ಆಂಗ್ಲೇಯ ಲೇಬರ್ ಮಂತ್ರಿ ಮಿ|| ಹರ್‌ಬರ್ಟ್ ಸ್ಯಾಮ್ಯೂಲ್ ಮಾಡಿದ್ದ ಭಾಷಣದಲ್ಲಿ, ಬ್ರಿಟಿಷರ ಕಲೋನಿಯಲ್ ಪದ್ಧತಿಯನ್ನು ಚರ್ಚಿಸುತ್ತಾ ಜೋರ್ ಯುದ್ಧ ಮುಗಿದ 6 ವರ್ಷಗಳಲ್ಲೇ ರಷ್ಯಾ, ಅಫ್ರಿಕಾಕ್ಕೆ ಸ್ವಾತಂತ್ರ್ಯ ಬಂದಿತು; ರೊಡೇಸಿಯಾ ನೋಡಿ, ಸಿಲೋನ್ ನೋಡಿ. ಇಲ್ಲಿಗೆಲ್ಲಾ ಸ್ವಾತಂತ್ರ್ಯ ಬಂದದ್ದು ಹೇಗೆ; ಅಲ್ಲಿ ಎಲ್ಲರೂ ಒಂದೇ ಮನಸ್ಸಿನಿಂದ ಕೆಲಸಮಾಡಿದರು. ಪಾಲಸ್ಟೈನ್ ಭಾರತ ಇವುಗಳ ಪ್ರಶ್ನೆ ಬೇರೆ. ಪಾಲಿಸ್ಟೈನಿನಲ್ಲಿ ಯಹೂದ್ಯರೂ ಮುಸ್ಲಿಮರೂ ಕದನಮಾಡುವರು, ಭಾರತದಲ್ಲಿ ಕಾಂಗ್ರೆಸ್ಸಿನವರೂ ಮುಸ್ಲಿಮರೂ ಹಾಗೆಯೇ ಇದರಿಂದ ಎಲ್ಲಾ ತೊಡಕಾಗಿ ಹೋಗಿದೆ— ಎಂದು ಹೇಳಿದರು.

ಮೆಣಸಿನಕಾಯಿ ಬಳ್ಳಿ

ಮೈಸೂರು ಹಿಂದೂಪುರದ ಗಡಿಯಲ್ಲಿ ಒಂದು ಅಡಿಕೆ ತೋಟ. ಆ ಮೆಣಸಿನಕಾಯಿ ಬಳ್ಳಿಯನ್ನು ಬೆಳೆಸುತ್ತಾರೆ. ಇದರ ಈಗಿನ ಉದ್ದ 15—20 ಅಡಿ. ಇದರಲ್ಲಿ ಈಗ ನಾಲ್ಕೂವರೆ ವರ್ಷದಿಂದ ಮೆಣಸಿನಕಾಯಿ ಬಿಡುತ್ತಿದೆ. ಒಂದು ಮುಕ್ಕಾಲರಿಂದ ಒಂದು ಇಂಚು ಉದ್ದ, ಮತ್ತೊಂದು ಒಂದೂವರೆ ಇಂಚು ಉದ್ದವಿರುತ್ತೆ. ಇಲ್ಲಿಯವರು ಇದೇ ತರಹ ಹಂಬನ್ನು ಏಕೆ ಬೆಳೆಸಬಾರದು? ವರ್ಷವರ್ಷ ನಾಟಿ ಮಾಡುವ ತೊಂದರೆ ತಪ್ಪುವುದಿಲ್ಲವೇ? ಇದಕ್ಕೆ ನಮ್ಮ ಮೈಸೂರು ವ್ಯವಸಾಯ ಇಲಾಖೆಯವರು ಗಮನ ಕೊಡುವರೆಂದು ನಂಬಿದೆ.

ಹಿಟ್ಲರ್ ಮುಸಲೋನಿಯನ್ನು ಪಂಜರದಲ್ಲಿರಿಸಿ

ಯುದ್ಧಾನಂತರ ಹಿಟ್ಲರ್ ಮುಸಲೋನಿಯನ್ನು ಯಾವ ರೀತಿ ಬಂಧನಮಾಡಬೇಕೆಂದು ಮಾರ್ಷಲ್ ಬಾಡೋಗ್ಲಿಯನ್ನು ಕೇಳಲು. ಈ ಇಬ್ಬರನ್ನೂ ಒಂದು ಪಂಜರದಲ್ಲಿಟ್ಟು ಯೂರೋಪಿನಲ್ಲಿ ಪ್ರದರ್ಶನ ಮಾಡಿದರೆ. ಈ ಯುದ್ಧದ ಖರ್ಚೆಲ್ಲಾ ವಸೂಲಾಗುವುದೆಂದು ಹೇಳಿದನಂತೆ

ಬಹಳ ಸಂತೋಷ. ವೈಸರಾಯರು ಕಲ್ಕತ್ತಾ ನಗರದ ಕ್ಷಾಮಪೀಡಿತರ ಮನೆ, ಧರ್ಮಶಾಲೆ, ಮುಂತಾದ್ದನ್ನು ಕಣ್ಣಾರೆ ನೋಡಿ ತಮ್ಮ ಕೈಲಾದದನು ಮಾಡಿದರು, ಮತ್ತು ಮಾಡುತ್ತಿರುವರು, ಪತ್ರಮಾನಪತ್ರಿಕೆಯವರಲ್ಲೂ ಸ್ನೇಹಭಾವವನ್ನು ತೋರಿಸುತ್ತಿರುವರು. ಇದರಿಂದ ಭಾರತಕ್ಕೆ ಏನೂ ಪ್ರಯೋಜನವಾಗಿಸಲಾರದು. ಭಾರತಕ್ಕೆ ಅವಶ್ಯಕವಾದುದು ಈಗಿರುವ ಗೊಂದಲ ತಪ್ಪಿಸಿ ಭಾರತೇಶ್ವರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳುವುದೊಂದೇ !

○ ○ ○ ○

ಗ್ರೇಟ್‌ಬ್ರಿಟನ್ನಿನಲ್ಲಿ 1942 ನೇ ನವೆಂಬರಿನವರೆಗೆ 27 ಲಕ್ಷ ಮನೆಗಳು ವಿಮಾನ ಧಾಳಿಯಿಂದ ಹಾಳಾಗಿವೆ. ಇದುವರೆಗೆ 25 ಲಕ್ಷ ಮನೆಗಳನ್ನು ದುರಸ್ತು ಮಾಡಿ ವಾಸಕ್ಕೆ ಅನುಕೂಲ ಮಾಡಿರುತ್ತಾರೆ. ಈ ಲೆಕ್ಕದಲ್ಲಿ ಆಂಗಡಿಗಳೂ ವ್ಯಾಪಾರದ ಕಟ್ಟಡಗಳೂ ಸೇರಿರುವುದಿಲ್ಲ.

ವಿವಿಧ ವಿಷಯ

ಫ್ರಾನ್ಸಿನಿಂದ ಓಟ್ಟರು 1941 ರಲ್ಲಿ ರಲ್ಲಿ 5060 ಟನ್ ಗೋಧಿ, 8000 ಟನ್ ಬಾರ್ಲಿ, 20,000ಟನ್ ಮಾಂಸವನ್ನು ಒತ್ತಾಯ ಪಡಿಸಿ ತೆಗೆದುಕೊಂಡನು. 1942 ರಲ್ಲಿಯೂ 8 ಸಾವಿರ ಟನ್ ಗೋಧಿ, 200 ಸಾವಿರ ಟನ್ ಮಾಂಸವನ್ನು ಲೂಟಿ ಮಾಡಿದನು- 1943 ರಲ್ಲಿ ಇನ್ನೆಷ್ಟು ಅಪಹರಿಸುವನೋ ದೇವರೇ ಬಲ್ಲ.

○ ○

ತುರ್ಕಿಯು ಸ್ವತಂತ್ರಪ್ರಭುತ್ವಕ್ಕಾಗಿ 20 ವರ್ಷಗಳಾಯಿತು. ಇದಕ್ಕಾಗಿ ಮೊಂಬಾಯಿನಲ್ಲಿ ತುರ್ಕಿ ರಾಯಭಾರಿಯು ಒಂದು ಸಂತೋಷಕೂಟವನ್ನು ಏರ್ಪಡಿಸಿದ್ದರು. ತುರ್ಕಿಯು ಈ ಯುದ್ಧದಲ್ಲಿ ತಟಸ್ಥವಾಗಿದ್ದುದರಿಂದ ಭಾರತಕ್ಕೆ ಯುದ್ಧ ಭಯ ತಪ್ಪಿತು.

○ ○

ಆಸ್ಟ್ರೇಲಿಯಾದ ಸಿಡ್ನಿಯಲ್ಲಿ 'ಇಂಡಿಯಾ ಲೀಗ್' ಎಂಬ ಸಂಸ್ಥೆಯನ್ನು ಸ್ಥಾಪಿಸಿರುವರು.

○ ○

ಬ್ರಿಟಿಷ್ ಹಡಕಾಸಿನ ಮಂತ್ರಿಯು ಈಗ ಬ್ರಿಟಿಷ್‌ನವರು ಪ್ರತಿ ದಿವಸವೂ ಹದಿಮೂರೂಕಾಲು ಮಿಲಿಯ ಪೌಂಡು ಯುದ್ಧಕ್ಕಾಗಿ ಖರ್ಚು ಮಾಡುತ್ತಿರುವರು ಎಂದು ಹೇಳಿರುವರು.

○ ○

ಒಂದು ವಾರದ ಕೆಳಗೆ ಜರ್ಮನಿಯ ಕ್ಯಾಸಲ್ ಪಟ್ಟಣದ ಮೇಲೆ ಮಿತ್ರರು 15 ಸಾವಿರ ಟನ್ ಸಿಡಿಮದ್ದನ್ನು ಸುರಿದ ಫಲವಾಗಿ ಆ ನಗರದ ಕಟ್ಟಡವೆಲ್ಲಾ. ಕಾರ್ಖಾನೆಗಳೂ ನಾಶವಾದುದಲ್ಲದೆ ಬೆಂಕಿ ಜ್ವಾಲೆಯು ಇನ್ನೂ ಉರಿಯುತ್ತಲೇ ಇರುವುದಂತೆ.

○ ○

ಬಂಗಾಳಕ್ಕೆ ಕಾಪಿಮಕ್ಕೆ ಭಾರತೀಯರು ಅಧಿಕಾರ ಮಾಡಿದ್ದೇ ಕಾರಣ, ಭಾರತೀಯರು ರಾಜ್ಯವಾಳುವುದಕ್ಕೆ ಯೋಗ್ಯತೆ ಇಲ್ಲ, ಎಂದು ಲಂಡನ್ನಿನ "ಗ್ರೇಟ್ ಬ್ರಿಟನ್ ಮತ್ತು ಈಸ್ಟ್" ಪತ್ರಿಕೆಯು ಬರೆದಿರುತ್ತೆ.

○ ○

ಡೆನ್ಮಾರ್ಕಿನ ದೇಶಭಕ್ತರು ಅಲ್ಲಿಯ 11 ನಾಜೀ ಎಲೆಕ್ಟ್ರಿಕ್ ನಿಲ್ದಾಣಗಳನ್ನು ನಾಶಮಾಡಿರುವರು.

ಭಾರತಕ್ಕೆ

ಈಗ ಭಾರತಕ್ಕೆ ಅಮೇರಿಕಾದ ಬಾಂಬರ್ ವಿಮಾನಗಳೂ, ಫೈಟರ್ ವಿಮಾನಗಳೂ ಹೇರಳವಾಗಿ ಲಿಬರ್ಟಿ ನೌಕೆಯಲ್ಲಿ ಒಂದಿವೆ. ಅಲ್ಲದೆ ಗೆಗೆನ ಮುಟ್ಟುವ ವಿಕ್ಟ್ರಾಫ್ಲ್ಸ್ ಗಂಡುಗಳೂ ಬಂದಿವೆ- ಜಪಾನಿನಲ್ಲಿ ಒಂದು ಇದುವೆಗೂ ಸ್ಥಳವಿಲ್ಲದಷ್ಟು ಜಪಾನುಗಳ ತುಂಬಾ ಯುದ್ಧ ಸಾಮಗ್ರಿಗಳು ಬರುತ್ತಿವೆ. ಜಪಾನು ಒಂದು ನಿಲ್ಲುವುದೇ ಕಡ ಆದರ ಮುತ್ತಲೂ ಮೂರದ ಹಲಗೆಗಳಲ್ಲಿ ಯಾತಗಳನ್ನು ಕಟ್ಟಿ ಕೂಲಿಯವರು ಬಿಡಿಸಾಡಲು ಮೂರ್ಗಮಾಡವರು. ಭಾರಿ ಭಾರಿ ಕ್ರೇನುಗಳು ಬಹು ಸುಲಭವಾಗಿ ಯುದ್ಧ ಸಾಮಗ್ರಿಗಳನ್ನು ಎತ್ತಿ ಭೂಮಿಯ ಮೇಲೆ ಇಡುವುವು. ಒಂದೊಂದು ಪದಾರ್ಥದ ಪೆಟ್ಟಿಗೆಯು 10 ಟನ್ ತೂಕ ಹತ್ತು ಭಾರವಿರುವುದು. ಈಗ ನಾನು ನೋಡಿದ ಜಪಾನು ಅಮೇರಿಕಾದಲ್ಲಿ ಕಟ್ಟಲ್ಪಟ್ಟು ಮೊದಲನೇ ಆರ್ಡರ್ ಕೆಲಸಕ್ಕೆ ಬಂದಿರುವುದು. ಅಮೇರಿಕಾದಿಂದ ಭಾರತಕ್ಕೆ ಒರಲು ಶತ್ರುವಿನ ಸಬ್‌ಮೆರೀನಿಗೆ ನಾವು ಅಂಜಲಿಲ್ಲ, ಅಂಜುವಹಾಗೂ ಇಲ್ಲ. ನನಗೆ ಪೆದರಿಕೆ ಒಂದೇ ! ಜಪಾನಿನಲ್ಲಿ ಸ್ವಲ್ಪವೂ ವೈಳವಿಲ್ಲದೆ ಸಾಮಾನುಗಳು ಅಡಕವಾಗಿರುವವೆ, ಸಮುದ್ರದ ನೀರು ಉಕ್ಕಿಬರುವುದೋ ಎಂದು ಪೆದರುತ್ತೇನೆ. ರೇವಿಗೆ ಈ ಲಿಬರ್ಟಿ ಹಡಗು ಬರುವುದೇ ತಡ. ಕೂಲಿಗಳು ಸಿದ್ಧರಾಗಿ ಸರಕುಗಳನ್ನು ಎತ್ತುವರು, ಇಂಜನಿಯರುಗಳು ಯಂತ್ರಗಳನ್ನು ಜೋಡಿಸುವರು, ರೈಲು ಇವನ್ನು ಒಯ್ಯಲು ಸಿದ್ಧವಾಗಿರುವುದು.

(ಬಿಲ್ಡಿಜ್ಞ, ಬೊಂಬಾಯಿ)

ಕೈರೋದಲ್ಲಿ ಟರ್ಕಿ ವಿದೇಶಾಂಗ ಮಂತ್ರಿಯೂ ಬ್ರಿಟಿಷ್ ವಿದೇಶಾಂಗ ಮಂತ್ರಿಯೂ ಅಮೇರಿಕಾ ವಿದೇಶಾಂಗ ಮಂತ್ರಿಯೂ ಕಲೆತು ಮಾಸ್ಕೋದಲ್ಲಿ ನಡೆದ ಮಾತುಕತೆಗಳ ವಿಷಯ ಚರ್ಚಿಸುತ್ತಿರುವರು.

○ ○

ಶ್ರೀಮತಿ ಚಿಯಾಂಗ್ ಕೈಷೇಕರು ಚೈನಾದ 4 ಬ್ಯಾಂಕುಗಳಲ್ಲಿಲ್ಲ 12 ಲಕ್ಷ ರೂಪಾಯಿಗಳನ್ನು ಸಾಲ ತೆಗೆದು, ಶತ್ರುಗಳು ಬಂಗಾಳಕ್ಕೆ ಕಳಿಸುವರು. ಈ ಸಾಲವನ್ನು ಚೀನಾದಲ್ಲಿ ಇನ್ನೈದು ತಿಂಗಳಲ್ಲಿ ಚೂರಾ ಎತ್ತಿ ತೀರಿಸುವರು.

'ಓಂ' ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಕೇಪಕಂವಾದ ಪದಾರ್ಥವೂ ಸೇರಿಲ್ಲ. ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವ ಸ್ಥಾನಗಳಲ್ಲಿಯೂ ದೇವರ ಪೂಜೆಗೂ ಔಷಧಿಕೆಳಿಗೂ, ತಿಂಡಿ ಪದಾರ್ಥಗಳಿಗೂ ಸುಖಸಂತೋಷ ಕಾಲದಲ್ಲೂ ಉಪಯೋಗಿಸಿಲ್ಬಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು
ಗ್ಯಾರಂಟಿ ಹೊಂದಿತೆ

ವಲ್ಲಭದಾಸ್ ತೇಜಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

Opera Talkies -- KrishnaPrema

ನ್ಯೂ ಆಪೇರಾ ಟಾಕೀಸ್ 2 ನೇ ವಾರ
ಭಾನುಮತಿ, ಸೂರ್ಯಕುಮಾರಿ, ಶಾಂತಿಕುಮಾರಿ, ಅಬ್ದಂಕಿ
ಮತ್ತು ಮೈಸೂರಿನ ಹಿರಣ್ಣಯ್ಯ ಪಾತ್ರವಹಿಸಿರುವ

ಕೃಷ್ಣಪ್ರೇಮ

(ತೆಲಗು ಭಾಷೆಯಲ್ಲಿ)

ಕೊನೆಯ ತರಗತಿ 0—3—0

ವಿಶಭಾರತಿ

ಎ
ದಸರಾ ಸಂಬಿಕೆ
ರೂಪಾಯಿಗೆ 'ರೂಪಾಷ್ಟೆ'?
— ಬೆಲೆ 2½ ಆಣೆ —
ಓ. ವಿ. ಗುಪ್ತ
ಒಳೇಪೇಟೆ ಬೆಂಗಳೂರು

ಮೈಸೂರು ವೈತ್ಯಪತ್ರಿಕೆ

ಉತ್ತಮ ಸಚಿತ್ರ ಕನ್ನಡ ತೆಲಗು
ಮಾಸಪತ್ರಿಕೆಗೆ
ಚಂದಾದಾರರಾಗಿರಿ
ಈಗಿನ ವಾರ್ಷಿಕ ಚಂದಾ ರೂ. ೩—೦—೦
ಬಿಡಿ ಪ್ರತಿ 4 ಆಣೆ.
ಹಿಗಿಕ ಜಾಹಿರಾತುಗಳ ದೃಷ್ಟಿಯಿಂದ ಬಹಳ ಉಪಯುಕ್ತವಾದ
ಸಲ್ಲಿಯೂ ಪತ್ರಿಕೆಯು ದೊರೆಯುತ್ತೆ.
ಕಾರ್ಯಾಲಯ;
ಶ್ರೀ ವಾಸವಾಂಬ ಭವನ
ಅಶೋಕ ರಸ್ತೆ, ಮೈಸೂರು

ದಿ ನ್ಯೂಸ್‌ಪೇಪರ್ ಹೌಸ್
ಮೈಸೂರು
ವೆಂಕಟೇಶ ಬುಕ್‌ಡಿಪೋ
ಶಿವಮೊಗ್ಗ

— ರಣಜಿತ ಟಾಕೀಸಿನಲ್ಲಿ ಪ್ರದರ್ಶಿಸಲ್ಪಡುವ 'ಗೆಸ್ಟ್' ಚಿತ್ರದ ಒಂದು ದೃಶ್ಯ —

ಶಕ್ತಿಸುಧಾ

ದೇಹದೌರ್ಬಲ್ಯ, ಬಲಹೀನತೆ ಇವಗಳನ್ನು
ಹೋಗಲಾಡಿಸಿ ವೀರ್ಯಾಭಿವೃದ್ಧಿ ಮಾಡಿ
ದೇಹಕ್ಕೆ ಕಾಂತಿಯನ್ನು ಉಂಟುಮಾಡುತ್ತೆ

ಈವತ್ತೇ ಕೊಂಡು ಉಪಯೋಗಿಸಿರಿ!

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಗಂಟೆ, ಚಾಮರಾಜಪುರಂ ಮೈಸೂರು.

ದೇಶಾಭಿಮಾನ ಸ್ವಾಭಿಮಾನ

ಇವುಗಳಿರದರ ದೃಷ್ಟಿಯಿಂದಲೂ ಮೈಸೂರಿನವರಿಗೆ ಜೀವವಿಮೆ ಮಾಡಲು

ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯ

ಪ್ರಜೆಗಳ ಶಾಖೆಯೇ ಅತ್ಯುತ್ತಮ ಸಂಸ್ಥೆ!

ವಿಮೆಯ ಮೊಬಲಗಿಗೆ ಸರ್ಕಾರದ ಹುಟ್ಟುವಳಿಯೇ ಆಧಾರ
ವಿಮೆಯ ಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಪಾವತಿಮಾಡಲಾಗುವದು
ವಿಮೆದಾರರಿಗೆ ಆಡಕಿತ ಸಮಯದಲ್ಲಿ ಪ್ರತಿನಿಧ್ಯವುಂಟು
ಸಾವಿರಕ್ಕೆ ಸಾಲಿಯಾನಾ ಇಪ್ಪತ್ತು ರೂ. ಗಳಂತೆ ಜೋನಸ್ ಹಂಚಿದೆ

ಹೆಚ್ಚು ವಿವರಗಳಿಗೆ ದಯವಿಟ್ಟು ಬರೆಯಿರಿ—

ಸೆಕ್ರೆಟರಿ,
ಮೈಸೂರು ಸರ್ಕಾರದ ಜೀವವಿಮೆ ಇಲಾಖೆ
ಬೆಂಗಳೂರು.

Edited Printed & published by M. S. Krishna Rao, at the Satyavadi Press. Chamaraja Agrahar, Mysore.